ಬಂದಿಲ್ಲ. ಏನಾದರು ಇದ್ದರೆ ಅದನ್ನು ತಿಳಿಸಿದರೆ ಯಾವ ರೀತಿಯ ತನಿಖೆಯನ್ನು ಬೇಕಾದರೂ ಮಾಡಿಸುವುದಕ್ಕೆ ತಾನು ತಯಾರು ಇದ್ದೇನೆ.

ಶ್ರೀ ಯು.ಆರ್..ಸಭಾಪತಿ:- ನನ್ನ ಪ್ರಶ್ನೆ ಇಷ್ಟೆ. ಅಲ್ಲಿ ಕಳಪೆ ಕಾಮಗಾರಿಯಾಗಿದೆ ಎಂದು ಹೇಳಿ ಅರ್ಜಿ ಹಾಕಿಲ್ಲ. ಈಗಾಗಲೇ ಮನೆಗಳನ್ನು ಪಡೆದುಕೊಂಡು ಯಾರು ಇದ್ದಾರೆ, ಅವರು ಎಷ್ಟಕ್ಕೆ ಪಡೆದುಕೊಂಡಿದ್ದಾರೋ ಅದಕ್ಕಿಂತ ಹೆಚ್ಚು ಪುನಃ ರಿಪೇರಿಗೋಸ್ಕರ ಖರ್ಚು ಮಾಡಿದ್ದಾರೆ. ಇದರಲ್ಲಿ ಕಿಟಕಿ ಬಾಗಿಲುಗಳಲ್ಲಿ ಅತ್ಯಂತ ಕಳಪೆ ಗುಣಮಟ್ಟದ ಮರಗಳನ್ನು ಹಾಕಿ ಅತ್ಯಂತ ಕಡಿಮೆ ಗುಣಮಟ್ಟದಲ್ಲಿ ಸಿಮೆಂಟ್ ಮಿಕ್ಸಿಂಗ್‌ನಲ್ಲಿ ಬಹಳಷ್ಟು ಕುಂದುಕೊರತೆಗಳನ್ನು ಮಾಡಿ ಎಲ್ಲಾ ಮನೆಗಳು ಬೀಳುವ ಸ್ಥಿತಿಯಲ್ಲಿ ಮಾರಾಟವಾಗುವಂಥ ಪರಿಸ್ಥಿತಿ ಉದ್ಭವವಾಗಿದೆ. ತೆಗೆದುಕೊಂಡವರು ಎಷ್ಟು ಹಣವನ್ನು ವೆಚ್ಚಮಾಡಿದ್ದಾರೋ ಮತ್ತೆ ಅದಕ್ಕಿಂತ ಜಾಸ್ತಿ ಖರ್ಚು ಮಾಡಿದ್ದಾರೆ. ಕಳಪೆ ಕಾಮಗಾರಿಯ ಬಗ್ಗೆ ನಿಮಗೆ ವರದಿ ಬರಬೇಕು. ಅದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ:- ನನಗೆ ಇಲ್ಲಿಯವರೆಗೆ ಬಂದಿಲ್ಲ. ಏನಾದರು ಅಲ್ಲಿ ಕಳಪೆ ಕಾಮಗಾರಿ ಆಗಿದ್ದರೆ ದಯಮಾಡಿ ಅದನ್ನು ತಾವು ಕೊಡಿ. ಅದರ ಬಗ್ಗೆ ಪೂರ್ತಿ ತನಿಖೆ ಮಾಡಿಸಿ ಸಂಬಂಧಪಟ್ಟ ಅಧಿಕಾರಿಗಳು ಯಾರು ಅದಕ್ಕೆ ಕಳಪೆ ಕಾಮಗಾರಿಯಲ್ಲಿ ಭಾಗವಹಿಸಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ತಯಾರು ಇದ್ದೇನೆ.

ಶ್ರೀ ಯು.ಆರ್. ಸಭಾಪತಿ:- ನನ್ನ ಮೂರನೇ ಪ್ರಶ್ನೆ 1996-97ರ ಸಾಲಿನಲ್ಲಿ ಹೊಸದಾಗಿ ಎಷ್ಟು ಮನೆಗಳನ್ನು ಹುಡ್ಕೋ ಯೋಜನೆಯಲ್ಲಿ ಕಟ್ಟುವ ಗುರಿಯನ್ನು ಇಟ್ಟುಕೊಂಡಿದ್ದೀರಿ? ಅದಕ್ಕಾಗಿ ಎಷ್ಟು ಹಣವನ್ನು ನಿಗದಿಪಡಿಸಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ:- ಹೌಸಿಂಗ್ ಬೋರ್ಡ್‌ನಿಂದ ಯಾವುದೂ ಇಲ್ಲ. ಆಶ್ರಯ ವತಿಯಿಂದ ತೆಗೆದುಕೊಳ್ಳುತ್ತಿದ್ದೇವೆ. ಹುಡ್ಕೋನಿಂದ ಯಾವುದೂ ಇಲ್ಲ.

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ 2ನೇ ಆಗಸ್ಟ್ 1996ರ 20ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 71 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿರುವ ಗೊಬ್ಬರ ಮತ್ತು ಕ್ರಿಮಿಕೀಟನಾಶಕ ಅಂಗಡಿಗಳು.

1102 (2105) **ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ ನಗರ):-** ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹುಬ್ಬಳ್ಳಿ ಧಾರವಾಡ ಜಿಲ್ಲೆಯಲ್ಲಿ ಇರುವ ಗೊಬ್ಬರ ಮತ್ತು ಕ್ರಿಮಿಕೀಟನಾಶಕ ಎಣ್ಣೆಯ ಅಂಗಡಿಗಳೆಷ್ಟು?

ಆ) ರೈತರಿಗೆ ರಸಗೊಬ್ಬರ ಸರಿಯಾಗಿ ವಿತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಈ) ಈ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):-

ಅ) ಹುಬ್ಬಳ್ಳಿ ಸೇರಿದಂತೆ ಧಾರವಾಡ ಜಿಲ್ಲೆಯಲ್ಲಿ 645 ರಸಗೊಬ್ಬರ ಮಾರಾಟ ಕೇಂದ್ರ ಮತ್ತು 506 ಕ್ರಿಮಿಕೀಟನಾಶಕ ಮಾರಾಟ ಕೇಂದ್ರಗಳು ಇರುತ್ತವೆ. ಹುಬ್ಬಳ್ಳಿ ತಾಲ್ಲೂಕಿನಲ್ಲಿ 62 ರಸಗೊಬ್ಬರ ಮಾರಾಟ ಕೇಂದ್ರ ಮತ್ತು 93 ಕೀಟನಾಶಕ ಮಳಿಗೆಗಳು ಇರುತ್ತವೆ.

ಆ) ಇಲ್ಲ, ಯಾವುದೇ ತೊಂದರೆ ಇಲ್ಲದಂತೆ ವಿತರಣೆ ವ್ಯವಸ್ಥೆ ಮಾಡಲಾಗಿದೆ.

ಇ) ಅನ್ವಯಿಸುವುದಿಲ್ಲ.

ಈ) ರಸಗೊಬ್ಬರ ಸರಬರಾಜಿನ ಬಗ್ಗೆ ಸರ್ಕಾರವು ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದೆ. ಕೇಂದ್ರ ಸರ್ಕಾರದ ರಸಗೊಬ್ಬರ ರಿಯಾಯಿತಿ ಯೋಜನೆಯನ್ನು ದಿನಾಂಕ : 1-4-96ರಿಂದಲೇ (1996-97ನೇ ಸಾಲಿನಲ್ಲಿ) ರಾಜ್ಯದಲ್ಲಿ ಜಾರಿಗೊಳಿಸಲಾಗುತ್ತಿದೆ. ಜೊತೆಗೆ ಕೇಂದ್ರ ಸರ್ಕಾರವು ದಿನಾಂಕ: 6-7-96ರಿಂದ ಹೆಚ್ಚಿಸಿದ ರಿಯಾಯತಿ ಸೌಲಭ್ಯವನ್ನು ಅಂದಿನಿಂದಲೇ ಜಾರಿಗೆ ಬರುವಂತೆ ಆದೇಶ ಹೊರಡಿಸಿ ಉಸ್ತುವಾರಿ ಮಾಡಲಾಗುತ್ತಿದೆ.

ವಿಷಯ:- ವಿಜಾಪುರ ಕೃಷಿ ಉತ್ಪನ್ನ ಮಾರುಕಟ್ಟೆಯ ಅಗ್ನಿಶಾಮಕ ವಾಹನಕ್ಕೆ ಚಾಲಕನ ನೇಮಕಾತಿ.

1105 (1768) **ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ):-** ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಕೃಷಿ ಉತ್ಪನ್ನ ಮಾರುಕಟ್ಟೆಯ ಆಡಿಯಲ್ಲಿರುವ ಅಗ್ನಿಶಾಮಕ ನೀರಿನ ವಾಹನಕ್ಕೆ ಖಾಯಂ ನೌಕರಿಯ ಚಾಲಕನಿಲ್ಲದೆ ಇರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ) ಹೌದು

ಆ) ಸದರಿ ಹುದ್ದೆಯನ್ನು ನಿಯಮಾನುಸಾರ ಭರ್ತಿ ಮಾಡಲು ಆದಷ್ಟು ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳಲಾಗುವುದು.